**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು, ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ).**
**ಸ್ಪೆಷಲ್ ಕೇಸ್. ನಂ. 5014/2020**

**ಪ್ರಾಸಾ ಃ 10**

**ಚಾಸಾ ಃ 8**

ಸಾಕ್ಷಿಯ ಹೆಸರು ಃ ಕವಿತಾ

ತಂದೆಯ ಹೆಸರುಃ ಕೆಂಪ

ವಯಸ್ಸು ಃ 23 ವರ್ಷ

ವೃತ್ತಿ ಃ ಕೂಲಿ ಕೆಲಸ

ವಿಳಾಸ ಃ ತಿತಿಮತಿ

ದಿಃ 25.07.2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

1. ನಾನು ತಿತಿಮತಿಯಲ್ಲಿ ವಾಸವಾಗಿದ್ದೇನೆ. ಈಗ್ಗೆ 4 ವರ್ಷಗಳ ಹಿಂದೆ ನಾನು ತೋಟದ ಕೆಲಸಕ್ಕೆ ಹೋಗುತ್ತಿದ್ದೆ. ನಾನು ಬಾಳೆಲೆ ಹಾಗೂ ಇತರ ಊರುಗಳಿಗೆ ಕೆಲಸಕ್ಕೆ ಹೋಗುತ್ತಿದ್ದೆ. ನನಗೆ ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ಇಲ್ಲ. ಆರೋಪಿ ನನ್ನನ್ನು ಎಲ್ಲಿಗೂ ಕೆಲಸಕ್ಕೆ ಕರೆದುಕೊಂಡು ಹೋಗಿಲ್ಲ. ನನಗೆ ಚಾಸಾ 1 ರವರ ಪರಿಚಯ ಇಲ್ಲ. ನನಗೆ ಮೃತ ಲಕ್ಷ್ಮಿಯ ಪರಿಚಯ ಇಲ್ಲ. ಆಕೆ ಎಲ್ಲಿ ಯಾವ ಕಾರಣಕ್ಕೆ ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿ ಹಾಗೂ ಲಕ್ಷ್ಮಿ ಪ್ರೀತಿಸುತ್ತಿದ್ದು ನಂತರ ಆರೋಪಿ ಆಕೆಯನ್ನು ತಿರಸ್ಕರಿಸಿದ ಕಾರಣ ಅವರಿಬ್ಬರಿಗೂ ಜಗಳವಾಗಿರುವ ವಿಷಯ ನನಗೆ ಗೊತ್ತಿಲ್ಲ. ಆರೋಪಿ ಲಕ್ಷ್ಮಿಗೆ ವಿಷ ಕುಡಿಸಿದ ಕಾರಣ ಆಕೆ ಮರಣ ಹೊಂದಿರುವ ವಿಷಯ ನನಗೆ ಗೊತ್ತಿಲ್ಲ. ಆರೋಪಿ ನನ್ನನ್ನು ಯಾವತ್ತೂ



ಪ್ರೀತಿಸಿರಲಿಲ್ಲ. ನಾನು ಆರೋಪಿಯ ವಿರುದ್ದ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಪಿ ಪಿ ಯವರು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

2. ಆರೋಪಿಯು ನನ್ನನ್ನು ಮೃತ ಲಕ್ಷ್ಮಿ ಹಾಗೂ ಇತರರನ್ನು ಬಾಳೆಲೆ ಹಾಗೂ ಇತರ ಕಡೆಗೆ ತೋಟದ ಕೆಲಸಕ್ಕೆ ಜೀಪಿನಲ್ಲಿ ಕರೆದುಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. 2020 ನೇ ಸಾಲಿನ ಜನವರಿ ಕೊನೆಯಲ್ಲಿ ಒಂದು ದಿನ ನಾನು ಆರೋಪಿಯ ಜೀಪಿನ ಮುಂದಿನ ಸೀಟಿನಲ್ಲಿ ಕುಳಿತ ಕಾರಣಕ್ಕೆ ಜೀಪಿನಲ್ಲಿದ್ದ ಲಕ್ಷ್ಮಿ ಆರೋಪಿಯೊಂದಿಗೆ ಜಗಳ ಮಾಡಿದ್ದು, ಅವರಿಬ್ಬರೂ ಹೊಡೆದಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಿಃ 03.02.2020 ರಂದು ಬೆಳಿಗ್ಗೆ ಎಂದಿನಂತರ ಅಯ್ಯನಕೆರೆ ಹಾಡಿಯಿಂದ ಕೆಲಸಕ್ಕೆ ನನ್ನನ್ನು ಹಾಗೂ ಇತರರನ್ನು ಆರೋಪಿಯು ಕರೆದುಕೊಂಡು ಹೋಗಿದ್ದು ಆಗ ಲಕ್ಷ್ಮಿ ಜೀಪಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನಮ್ಮನ್ನು ಬಾಳೆಲೆಯಲ್ಲಿ ಕಾಫಿ ಕುಯ್ಯಲು ಬಿಟ್ಟು ವಾಪಸ್ಸು ಜೀಪಿನಲ್ಲಿ ಸಂಜೆ ನಮ್ಮನ್ನು ಕರೆದುಕೊಂಡು ಹೋಗಲು ಬಂದಿದ್ದು, ಆತನೊಂದಿಗೆ ಈಶ್ವರ್ ರವರೂ ಕೂಡ ಬಂದಿರುತ್ತಾರೆ ಹಾಗೂ ಆರೋಪಿಯು ಸಂಜೆ ವಾಪಸ್ ಹೋಗುವಾಗ ತಿತಿಮತಿಯಲ್ಲಿ ಇಳಿದುಕೊಂಡು ಹೋಗಿದ್ದು ಈಶ್ವರ್ ನಮ್ಮನ್ನು ಅಯ್ಯನಕೆರೆ ಹಾಡಿಗೆ

.3.

ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ನಂತರ ವಿಷಯ ತಿಳಿಯಲಾಗಿ ಆರೋಪಿ ನನ್ನನ್ನು ಪ್ರೀತಿಸುತ್ತಿದ್ದಾನೆ ಎನ್ನುವ ವಿಚಾರದಲ್ಲಿ ಆರೋಪಿಗೂ ಲಕ್ಷ್ಮಿಗೂ ಜಗಳ ಆಗಿದ್ದು ಆರೋಪಿಯು ಲಕ್ಷ್ಮಿಯನ್ನು ಕೊಲ್ಲುವ ಉದ್ದೇಶದಿಂದ ಬಾಳೆಲೆ ಸಮಿಪ ಆಕೆಗೆ ವಿಷ ಕುಡಿಸಿದ್ದರಿಂದ ದಿಃ 10.02.2020 ರಂದು ಆಕೆ ಮೈಸೂರಿನ ಕೆ ಆರ ಆಸ್ಪತ್ರೆಯಲ್ಲಿ ಮೃತಪಟ್ಟಿರುವ ಬಗ್ಗೆ ನನಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಈ ಬಗ್ಗೆ ಪೊಲೀಸರ ಸಮಕ್ಷಮ ದಿಃ 25.02.2020 ರಂದು ನನಗೆ ಈಗ ಓದಿ ಹೇಳಿದಂತೆ " ನಾನು —— ತಿಳಿದಿರುತ್ತದೆ" ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ನಿಪಿ 7 ಎಂದು ಗುರುತಿಸಲಾಯಿತು. ನಿಪಿ 7 ರಲ್ಲಿರುವ ಎಲ್ಲ ವಿಚಾರಗಳು ಗೊತ್ತಿದ್ದರೂ ಕೂಡ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ**

**ಮರು ವಿಚಾರಣೆ ಇಲ್ಲ**.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಒಹೇಕೇ ಸರಿ ಇದೆ

Sd/-xxx

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಡಗು-ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ)